ಕೈಗಳನ್ನು ಪ್ರೀತಿಯಿಂದ ಹಿಡಿದುಕೊಂಡಿದ್ದು ಯಾವಾಗ ಎಂದು ನೆನಪಿಸಿಕೊಂಡು ನಿಟ್ಟುಸಿರಿಟ್ಟಳು. ಬಹುಶಃ ಅನಂತರವೇ ತನ್ನ ಕೈಗಳು ಒರಟುಬಿದ್ದವೇನೋ ಎಂದುಕೊಂಡು ಕೈಗಳನ್ನು ಟೀಪಾಯಿ ಮೇಲಿಂದ ಹಿಂದೆಗೆದುಕೊಂಡಳು.

ವಿಭಾವರಿ ಕೊಟ್ಟ ಗ್ಲಾಸಿನಿಂದ ಒಂದು ದೊಡ್ಡ ಗುಟುಕು ವೈನ್ ಹೀರಿದ ಮಧುವಂತಿ, 'ಬನ್ನಿ ಬನ್ನಿ, ಈಗ ಆಟ ಶುರು ಮಾಡೋಣ' ಎಂದು ಆಟದ ನಿಯಮಗಳನ್ನು ಹೇಳಲು ಪ್ರಾರಂಭಿಸಿದಳು. ತೆರೆದ ಬಾಲ್ಕನಿಯಿಂದ ಬೀಸುತ್ತಿದ್ದ ತಂಗಾಳಿಯಲ್ಲಿ ಮಳೆಯ ಸೂಚನೆ ದಟ್ಟವಾಗಿತ್ತು. ಕಲ್ಯಾಣಿಯ ಎದೆಯಲ್ಲಿ ಏನೋ ತಲ್ಲಣ. ಇಂದೇಕೋ ಎಲ್ಲವೂ ಅವಳ ಕೈಮೀರಿ ನಡೆಯುತ್ತಿತ್ತು. ಈ ಆಟ ಬೇಡವಿತ್ತು ಎಂದು ಅವಳಿಗೆ ಅನ್ನಿಸುತ್ತಿತ್ತು. ಅವರು ಏನೇ ಕೇಳಲಿ ಹೇಳುವ ಮನಸ್ಸು ಅವಳಿಗಿರಲಿಲ್ಲ. ಅವರಿಗೆ ಹೇಳುವುದಿರಲಿ, ಕಳೆದ ಜೀವನವನ್ನು ಅವಳೇ ನೆನಪು ಮಾಡಿಕೊಳ್ಳುತ್ತಿರಲಿಲ್ಲ. ಮನಸ್ಸನ್ನು ದುರ್ಬಲಗೊಳಿಸುವ ಆ ನೆನಪುಗಳನ್ನು ಮತ್ತೇಕೆ ನೆನೆಯಬೇಕು, ಅದು ಆಗಿಹೋಗಿದೆ, ಮುಗಿದುಹೋಗಿದೆ ಎಂದು ಅವಳು ನಿನ್ನೆಗಳನ್ನು ಎತ್ತಿಟ್ಟುಬಿಟ್ಟಿದ್ದಳು, ಅರವಿಂದನ ಹೆಸರನ್ನು ಒಬ್ಬಳೇ ಇರುವಾಗ ಸಹ ಹೇಳಿಕೊಳ್ಳುತ್ತಿರಲಿಲ್ಲ. ಯಾವುದೇ ಒಪ್ಪಂದವಿಲ್ಲದೆ, ನಾಳೆಯ ಕುರಿತಾದ ಯಾವುದೇ ಭಾಷೆ ಪ್ರಮಾಣವಿಲ್ಲದೆ ಸಂಗಾತಿಯಾಗಿ ಒದಗಿದವ ಅರವಿಂದ. ಅವನಿಗೆ ಮದುವೆಯಾಗಿದೆ ಎನ್ನುವುದು ಗೊತ್ತಿತ್ತು, ಆದರೆ ಅವನ ಪರಿಚಯವಾಗುವಾಗ, ಸ್ನೇಹವಾಗುವಾಗ ಅದು ಪ್ರೇಮವಾಗಬಹುದು ಎನ್ನುವ ಸುಳಿವೂ ಅವಳಿಗೆ ಇರಲಿಲ್ಲ. ಅವನು ವಿವಾಹಿತ ಎನ್ನುವ ಕಾರಣಕ್ಕೆ ಅವಳಲ್ಲಿ ಗಿಲ್ಟ್ ಇದ್ದರೂ ಯಾವುದೇ ಕಾರಣಕ್ಕೂ ಅವನ ಮದುವೆಯನ್ನು ಡಿಸ್ಟರ್ಬ್ ಮಾಡುವುದಿಲ್ಲ ಎಂದು ತನ್ನನ್ನು ತಾನು ಸಮಾಧಾನ ಪಡಿಸಿಕೊಳ್ಳುತ್ತಿದ್ದಳು. ಆದರೆ, ಇಂತಹ ಯಾವ ಸಂಬಂಧವೂ ಸಂಬಂಧಿಸಿದವರನ್ನು ಸುಡದೆ ಬಿಡುವುದಿಲ್ಲ ಎಂದು ಆಗ ಅರ್ಥವಾಗಿರಲಿಲ್ಲ. ಇವನು ಅಥವಾ ಇವಳು ನಾಳೆಯೇ ಕೈತಪ್ಪಿ ಹೋಗಬಹುದು ಎನ್ನುವ ಕ್ಷಚಿತ್ತತೆಯೇ ಇಂತಹ ಸಂಬಂಧಗಳಿಗೆ ಆ ತೀವ್ರತೆ ಕೊಡುವುದೋ ಏನೋ. ಅರವಿಂದನ ಸಾಂಗತ್ಯದಲ್ಲಿ ಪಡೆದ ಅತ್ಯಂತ ಪ್ರೀತಿದಾಯಕವಾದದ್ದು ಏನು ಎಂದು ಯೋಚಿಸಿಕೊಂಡರೆ ಅವನ ಸಾಂಗತ್ಯವೇ ಜೀವನ ತನಗಿತ್ತ ಅತ್ಯಮೂಲ್ಯವಾದ ಉಡುಗೊರೆ ಎಂದು ಅವಳಿಗನ್ನಿಸುತ್ತಿತ್ತು. ಅವಳು ಯಾವುದೇ ಹಾಡನ್ನು ಶುರು ಮಾಡಿದರೂ ಅವನು ಪೂರ್ತಿ ಮಾಡುತ್ತಿದ್ದ, ಒಮ್ಮೊಮ್ಮೆ ಫೋನ್ ಮಾಡಿ, ಒಂದೂ ಮಾತನಾಡದೆ ಕವಿತೆಯೊಂದನ್ನು ಕೇಳಿಸುತ್ತಿದ್ದ, ಎಲ್ಲೇ ಹೋಗಲಿ, ಯಾವ ಊರಿಂದ ಬರಲಿ ಮರೆಯದೆ ಅವಳಿಗೊಂದು ಕವಿತೆಗಳ ಪುಸ್ತಕ ತಂದುಕೊಡುತ್ತಿದ್ದ. ಅವಳ ಎಲ್ಲ ಕನಸುಗಳಿಗೂ ಕಿವಿಯಾಗುತ್ತಿದ್ದ. ಚೆನ್ನಾಗಿತ್ತು, ಎಲ್ಲವೂ ಕನಸಿನಂತೆ ಚೆನ್ನಾಗಿತ್ತು. ಆದರೆ, ಆ ದಿನವನ್ನು ಕಲ್ಯಾಣಿ ಇನ್ನೂ ಮರೆತಿಲ್ಲ. ಅವಳನ್ನು ಭೇಟಿಯಾಗಲು ಬಂದ ಅರವಿಂದನ ಕಣ್ಣುಗಳು ಮೊದಲಬಾರಿ ಅವಳ ಕಣ್ಣುಗಳನ್ನು ತಪ್ಪಿಸಿದವು. 'ನನ್ನ ಹೆಂಡತಿಗೆ ಗೊತ್ತಾಗಿದೆ ಕಲ್ಯಾಣಿ... ನಾನು ದೂರ ಸರಿಯಲೇಬೇಕಿದೆ... ನನ್ನ ಒಂದು ತಪ್ಪು ನಿರ್ಧಾರ ಸುಮಾರು ಬದುಕುಗಳನ್ನು ಹಳಿತಪ್ಪಿಸಿಬಿಡುತ್ತದೆ...' ಅವನ ಮಾತಿನಲ್ಲಿ 'ತಪ್ಪು' ಎನ್ನುವ ಪದ ಕೇಳಿದ ಕೂಡಲೆ ಅವಳ ಮೇಲೆ ಕುದಿನೀರು ಬಿದ್ದಂತಾಗಿತ್ತು. ಅರವಿಂದ ದೂರಾಗಿದ್ದ. ಅವನ ಕುಟುಂಬದ ನೆಮ್ಮದಿಯನ್ನು ಎಂದೂ ಹಾಳುಮಾಡಲಾರೆ ಎನ್ನುವುದು ಕಲ್ಯಾಣಿಯೇ ತನ್ನ ಸುತ್ತಲೂ ಹಾಕಿಕೊಂಡಿದ್ದ ಬೇಲಿ. ಆದರೆ, ಯಾವುದೇ ಬೇಲಿಗೆ ಅವಳ ಮನಸ್ಸನ್ನು ಸಮಾಧಾನ ಮಾಡುವ ಶಕ್ತಿ ಇರಲಿಲ್ಲ. ಅವಳ ಮೈಯೆಂಬ ಮೈ, ತಲೆಗೂದಲು, ಕಣ್ಣುರೆಪ್ಪೆ, ಅಂಗೈ, ಅಂಗಾಲು, ಮೈಚರ್ಮ ಎಲ್ಲವೂ ಬೆಂಕಿಗೆ ಸಿಲುಕಿದಂತೆ ಉರಿಯುತ್ತಿದ್ದವು. ಅರವಿಂದನ ಹೆಸರು, ಅವನ ಕಣ್ಣುಗಳ ಆಳ, ಅವನ ತುಟಿಗಳ ನಗು, ಅವನ ಸ್ಪರ್ಶದ ನೆನಪು, ಅವನ ಪ್ರೇಮದ ನೆನಪು, ಅವನ ಸ್ನೇಹಿತರು, ಅವನು ತಂದುಕೊಟ್ಟ ಪುಸ್ತಕಗಳು, ಅವನೊಡನೆ ಕೇಳಿದ್ದ, ಗುನುಗುನಿಸಿದ್ದ ಹಾಡುಗಳು